

ಜೀವಿಗಳಾಗಿದ್ದು ಕಾಲಕ್ರಮೇಣ ಜೀವಕೋಶದ ಹೊರಗೆ ಬದುಕುವ ವಂಶವಾಹಿನಿ ಮರೆಯಾಗುತ್ತಾ ಬಂದು ಸಂಪೂರ್ಣ ಪರಾವಲಂಬಿಗಳಾದವು.

**ಪ್ರೋಗ್ರೆಸಿವ್ (ಪಾರಾಗುವಿಕೆ):** ದೊಡ್ಡ ಜೀವಿಯ ವಂಶವಾಹಿನಿಯಿಂದ ಪಾರಾದ ಭಾಗದಿಂದ ಇವು ಹುಟ್ಟಿಕೊಂಡವು.

**ವೈರಸ್ ಫಸ್ಟ್ ಊಹೆ:** ಭೂಮಿಯ ಮೇಲೆ ಮೊದಲ ಜೀವಕೋಶ ಹುಟ್ಟುವ ಹೊತ್ತಿಗೆ ಅಥವಾ ಅದಕ್ಕೂ ಮೊದಲೇ ಸಂಕೀರ್ಣ ಅಣುವಾದ ವೈರಸ್‌ಗಳು ಇದ್ದವು.

ಇದೇನೋ ಸರಿ; ಆದರೆ ದಿನಕ್ಕೊಂದು ರೀತಿಯ ಹೊಸ ವೈರಸ್‌ಗಳು ಎಲ್ಲಿಂದ ಬರುತ್ತಿವೆ? ಇವುಗಳಲ್ಲಿ ಹೆಚ್ಚಿನವು ಕಾಡಿನಲ್ಲಿ, ವನ್ಯಜೀವಿಗಳಲ್ಲಿ ಇರುತ್ತವೆ. ಅರಣ್ಯ ನಾಶ, ಅಭಿವೃದ್ಧಿಯ ಹೆಸರಿನಲ್ಲಿ ಪರಿಸರ ನಾಶವಾದಾಗ, ಸಹಜ ಪರಿಸರದಲ್ಲಿದ್ದ ಪ್ರಾಣಿ ಪಕ್ಷಿಗಳು ಕಾಡು ನಾಶವಾದಂತೆ, ಅವು ನಾಡಿಗೆ ಬರುತ್ತಿವೆ, ಮಾನವ ಸಂಪರ್ಕಕ್ಕೆ ಬರುತ್ತಿವೆ. ವೈರಸ್‌ಗಳನ್ನು ತಡೆಯುವ ಶಕ್ತಿ ಆ ಪ್ರಾಣಿ ಪಕ್ಷಿಗಳಿಗೆ ನೈಸರ್ಗಿಕವಾಗಿದೆ. ಅಂತಹ ಸಾಮರ್ಥ್ಯ ಮಾನವರಿಗೆ ಇಲ್ಲದ ಸಂದರ್ಭದಲ್ಲಿ ವೈರಸ್‌ಗಳು ಭಾರೀ ಅನಾಹುತಕ್ಕೆ ಕಾರಣವಾಗುತ್ತವೆ.

### ಸಾಂಕ್ರಾಮಿಕ ಜೀವಂತ ದ್ರವ

1982ರಲ್ಲಿ ರಷ್ಯಾದ ಡಿಮಿಟ್ರಿ ಇವಾನೋವಿಸ್ಕಿ ಸೋಂಕಿದ್ದ ಹೊಗೆಸೊಪ್ಪಿನ ಗಿಡದ ರಸವನ್ನು ಶೋಧಕಗಳ ಮೂಲಕ ಸೋಸಿ ತೆಗೆದರು. ನಂತರ ಆ ದ್ರವವನ್ನು ಆರೋಗ್ಯವಾಗಿದ್ದ ಗಿಡಗಳ ಮೇಲೆ

## ಐದು ಮಾರಣಾಂತಿಕ ವೈರಸ್‌ಗಳು

### 1 ಮಾರ್ಬರ್ಗ್ ವೈರಸ್

1967ರಲ್ಲಿ ಜರ್ಮನಿಯಲ್ಲಿ ಕಾಣಿಸಿಕೊಂಡ ಇದು ಉಗಾಂಡಾದ ಸೋಂಕಿತ ಮಂಗಗಳಿಂದ ಬಂದಿತ್ತು. ತೀವ್ರ ಜ್ವರ ಮತ್ತು ರಕ್ತಸ್ರಾವದಿಂದ ಅಂಗಾಂಗ ವೈಫಲ್ಯ ಮತ್ತು ಮರಣದ ಸಾಧ್ಯತೆ ಹೆಚ್ಚು.

ನಂತರ 2000 (ಕಾಂಗೋ) ಮತ್ತು 2005ರಲ್ಲಿ (ಅಂಗೋಲಾ) ಕಾಣಿಸಿಕೊಂಡ ಈ ಸೋಂಕಿನಲ್ಲಿ ಮರಣದ ಸಾಧ್ಯತೆ ಶೇಕಡಾ ಎಂಬತ್ತಕ್ಕೂ ಹೆಚ್ಚು.

### 2. ಎಬೋಲ ವೈರಸ್

1976 ರಲ್ಲಿ ಸುಡಾನ್ ಮತ್ತು ಕಾಂಗೋದಲ್ಲಿ ಶುರುವಾದ ಈ ವೈರಸ್‌ನಲ್ಲಿ ಅನೇಕ ತಳಿಗಳಿವೆ. ಅದರಲ್ಲಿ ಸುಡಾನ್ ತಳಿ, ಶೇಕಡಾ ಎಪ್ಪತ್ತೊಂದರಷ್ಟು ಮಾರಣಾಂತಿಕವಾದದ್ದು.

### 3. ರೇಬಿಸ್ ವೈರಸ್

ಭಾರತ ಮತ್ತು ಆಫ್ರಿಕಾದಲ್ಲಿ ಕಂಡುಬರುವ ಈ ವೈರಸ್‌ನ ಹಾವಳಿ ಲಸಿಕೆಯಿಂದ ಬಹಳಷ್ಟು ಕಡಿಮೆಯಾಗಿದೆ. ಮೆದುಳಿನ ಮೇಲೆ ಪರಿಣಾಮ ಬೀರುವ ಇದು ಅತ್ಯಂತ ಅಪಾಯಕಾರಿ ವೈರಸ್. ಸರಿಯಾದ ಚಿಕಿತ್ಸೆ ಸಿಗದಿದ್ದರೆ ಶೇಕಡಾ ನೂರರಷ್ಟು ಮರಣದ ಸಾಧ್ಯತೆ ಇದೆ!

### 4.ಎಚ್‌ಐವಿ

1982ರಲ್ಲಿ ಪ್ರಥಮ ಬಾರಿಗೆ ಗುರುತಿಸಲ್ಪಟ್ಟ ಇದು ಮಾನವ ಇತಿಹಾಸದಲ್ಲೇ ಅತ್ಯಂತ ದೊಡ್ಡ ಮಾರಣಾಂತಿಕ ಸೋಂಕು ಎನ್ನಲಾಗುತ್ತದೆ. ಆಂಟಿವೈರಲ್ ಔಷಧಗಳ ನೆರವಿನಿಂದ ಈ ಸೋಂಕಿದ್ದರೂ ಬದುಕನ್ನು ನಡೆಸಲು ಸಾಧ್ಯವಿದೆ.

### 5. ಸಿಡುಬು

1980ರಲ್ಲಿ ವಿಶ್ವ ಆರೋಗ್ಯ ಸಂಸ್ಥೆ ಜಗತ್ತನ್ನು ಸಿಡುಬು ಮುಕ್ತ ಎಂದು ಘೋಷಿಸಿತು. ಸಾವಿರಾರು ವರ್ಷಗಳಿಂದ ಮಾನವ ಜನಾಂಗವನ್ನು ತೀವ್ರವಾಗಿ ಕಾಡಿದ ಸೋಂಕಿದು. ಸೋಂಕು ತಗುಲಿದ ಮೂವರಲ್ಲಿ ಒಬ್ಬರನ್ನು ಕೊಂದ ಅಪಖ್ಯಾತಿಯು ಈ ವೈರಸ್‌ಗಿದೆ. ಇಪ್ಪತ್ತನೆಯ ಶತಮಾನದಲ್ಲೇ ಮೂವತ್ತು ಕೋಟಿ ಜನರನ್ನು ಬಲಿ ತೆಗೆದುಕೊಂಡಿದೆ ಎನ್ನಲಾಗಿದೆ!

ವೈರಸ್‌ಗಳಿಂದ ಅನೇಕ ಪ್ರಯೋಜನಗಳೂ ಇವೆ. ವೈದ್ಯಕೀಯ ಮತ್ತು ಕೃಷಿ ಕ್ಷೇತ್ರದಲ್ಲಿ ನಿರ್ದಿಷ್ಟ ಜೀವಕೋಶಗಳಿಗೆ ಬೇಕಾದ ವಸ್ತು ತಲುಪಿಸುವ ವಾಹಕವನ್ನಾಗಿ ವೈರಸ್‌ಗಳನ್ನು ಬಳಸಲಾಗುತ್ತದೆ. ಹಾನಿಕಾರಕ ಬ್ಯಾಕ್ಟೀರಿಯಾವನ್ನು ನಾಶ ಮಾಡಲು, ಕ್ಯಾನ್ಸರ್ ನಿಯಂತ್ರಣ ಮತ್ತು ತಡೆಗಟ್ಟುವಿಕೆಯಲ್ಲಿ ಕೂಡ ಈ ವೈರಸ್‌ಗಳು ಸಹಾಯಕ.